**2 ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಕಡೂರು**

ಅಸಲು ದಾವಾ ಸಂಖ್ಯೆ 12/2017.

D.W.-1.

ದಿನಾಂಕಃ03-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರವಾಗಿ ಶ್ರೀ ಎಂ ಓ ಜೆ ವಕೀಲರಿಂದಃ-**

ನನ್ನ ತಂದೆ ಆರೋಗ್ಯವಾಗಿ ಚೆನ್ನಾಗಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕಿವಿ ಕೇಳುವುದಿಲ್ಲ ಮತ್ತು ಕಣ್ಣುಗಳ ಶಸ್ತ್ರ ಚಿಕಿತ್ಸೆ ಆಗಿರುತ್ತದೆ. ಈ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾದಿಯು ಈ ದಾವೆಯನ್ನು ಗರ್ಜೆ ಗ್ರಾಮದ ಸರ್ವೆ ನಂ.424/ಎ  ಗೆ ಸಂಬಂಧಿದಂತೆ ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿಯು ಈ ದಾವೆಯನ್ನು

ದಾವಾ ಆಸ್ತಿಯು ನನಗೆ ಸೇರಿರುತ್ತದೆ ಎಂದು ಹೇಳಿ ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ನನ್ನ ತಂದೆಯು ಪ್ರತಿವಾದ ಪತ್ರ ಸಲ್ಲಿಸಿರುವ ವಿಚಾರ ನನಗೆ ಗೊತ್ತು. ದಾವಾ ಆಸ್ತಿಯನ್ನು ವಾದಿಯು ದಿಃ20.05.1980 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ ಆನಂದಪ್ಪ ಬಿನ್ ಗವಿರಂಗಪ್ಪ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ವಾದಿಯು ಕ್ರಯಕ್ಕೆ ಪಡೆದಿರುವ ಆಸ್ತಿಗೆ ವಾದಿಯೇ ಮಾಲೀಕತ್ವ ಹೊಂದಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ವಾದಿಯ ಹೆಸರಿಗೆ ಕಂದಾಯ ದಾಖಲೆಗಳು ಇರುತ್ತದೆ ಹಾಗೂ ವಾದಿಯು ಕಂದಾಯ ಪಾವತಿ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು 2 ನೇ ತರಗತಿವರೆಗೂ ಓದಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ ಆದರೆ ಸಹಿ ಮಾತ್ರ ಮಾಡುತ್ತೇನೆ. ವಾದಿ ಹೆಸರಿಗೆ ಪೂರ್ವ ಪಶ್ಚಿಮ 45 ಅಡಿ ಉತ್ತರ ದಕ್ಷಿಣ 54 ಅಡಿ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಿಸಿದ 15X45 ಅಡಿ ಆಸ್ತಿಯನ್ನು ಒತ್ತುವರಿ ಮಾಡಿ ನಾನು ಗುಡಿಸಲು ಕಟ್ಟಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ದಿನಾಂಕ 4.11.2016 ರಂದು ನನ್ನ ತಂದೆಗೆ ಗುಡಿಸಲು ತೆರವು ಮಾಡುವಂತೆ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ6 ಅಂಚೆ ಸ್ವೀಕೃತಿ ತೋರಿಸಿ ಅದರಲ್ಲಿರುವ ಸಹಿ ಯಾರದ್ದು ಎಂದು ಕೇಳಿದಾಗ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ5 ರಲ್ಲಿ ನಮೂದಿಸಿರುವ ವಿಳಾಸ ನನ್ನ ತಂದೆಗೆ ಸೇರಿರುತ್ತದೆ ಎಂದರೆ ಸರಿ. ನಿಪಿ5 ರಲ್ಲಿ ನಮೂದಿಸಿರುವ ವಿಳಾಸಕ್ಕೆ ಏನಾದರೂ ಕಳುಹಿಸಿದರೆ ನಮಗೆ ತಲುಪುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ5 ರಂತೆ ನೋಟೀಸನ್ನು ನನ್ನ ತಂದೆಗೆ ನೀಡಿದ್ದರು ಕೂಡ ದಾವಾ ಬಿ ಅನುಸೂಚಿ ಆಸ್ತಿಯನ್ನು ಖಾಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಅಸೆಸ್ ಮೆಂಟ್ ನಂಬರ್ ಇರುವುದಿಲ್ಲ. ನಿಡಿ 7 ರ ಪ್ರಕಾರ ವಾದಿಗೆ ಪೂರ್ವ ಪಶ್ಚಿಮ 45 ಅಡಿ ಉತ್ತರ ದಕ್ಷಿಣ 54 ಅಡಿ ಆಸ್ತಿ ಇದೆ ಎಂದು ಗರ್ಜೆ ಪಂಚಾಯಿತಿ ರವರು ದಾಖಲೆ ನೀಡಿದ್ದಾರೆ ಎಂದರೆ ಸರಿ. ನಿಡಿ 8 ನ್ನು ನೀಡುವಂತೆ ನಾನೇ ಗ್ರಾಮ ಪಂಚಾಯಿತಿಗೆ ಅರ್ಜಿ ನೀಡಿರುತ್ತೇನೆ. ನಾನು ಅರ್ಜಿ ನೀಡಿದ ನಂತರ ಪಂಚಾಯಿತಿ ರವರು ನನಗೆ ಮತ್ತು ವಾದಿಗೆ ನೋಟೀಸು ನೀಡಿದ್ದರು. ಸದರಿ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನಿಡಿ 8 ರ ದಾಖಲೆಯಂತೆ ಆಸ್ತಿ ಅಳತೆ

ಮಾಡಿ ವರದಿ ನೀಡಲು ಪಿ.ಡಿ.ಓ. ರವರಿಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿ ಅನ್ನು ಅಳತೆ ಮಾಡಲು ಇಂಜಿನಿಯರ್ ರವರು ಮಾತ್ರ ಅಧಿಕಾರ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 8 ನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪಂಚಾಯಿತಿ ರವರು ತಾಲ್ಲೂಕು ಸರ್ವೆಯರ್ ರವರ ಸಹಾಯ ಪಡೆದು ಅಳತೆ ಮಾಡಿ ನಕ್ಷೆ ತಯಾರಿಸಿ ಖಾತಾ ಅಸೆಸ್ ಮೆಂಟ್‌ಗಳಲ್ಲಿ ವಿಸ್ತೀರ್ಣ ನಮೂದಿಸುತ್ತಾರೆ ಎಂದರೆ ಸರಿಯಲ್ಲ.

ನಾನು ನಮ್ಮ ಪ್ರತಿವಾದ ಪತ್ರದಲ್ಲಿ ನನ್ನ ಮಾವನಾದ ಹನುಮಂತಪ್ಪ ರವರ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತೇನೆ. ಈ ಕುರಿತು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಹನುಮಂತಪ್ಪ ರವರಿಂದ ನನಗೆ ಅಥವಾ ನನ್ನ ತಂದೆಗಾಗಲೀ ಯಾವುದೇ ನೊಂದಾಯಿತ ದಾಖಲೆಗಳು ಆಗಿರುವುದಿಲ್ಲ. ಹನುಮಂತಪ್ಪ ರವರ ಹೆಸರಿನಲ್ಲಿರುವ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮಗೆ ಸಂಬಂಧಿಸಿದಂತೆ ಯಾವುದೇ ಆಸ್ತಿ ಇಲ್ಲದಿದ್ದರು ಕೂಡ ವಾದಿಗೆ ಸೇರಿದ ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಹೆಸರಿಗೆ ಕ್ರಯ ಪತ್ರದಂತೆ ಪಂಚಾಯಿತಿ ದಾಖಲೆಗಳಲ್ಲಿ ವಾದಿಯ ಹೆಸರನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 4 ರಿಂದ 6 ಅನ್ನು ಈ ಕೇಸಿಗೆಂದು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

sd/xxx

(ಈರಪ್ಪ ಢವಳೇಶ್ವರ್)
**೨ ನೇ ಹೆ.ಪ್ರಃದಃನ್ಯಾಃದಂ.ರವರು, ಕಡೂರು.**